c) If so, when this work will be commenced?

Sri C.M.UDASI (Minister for Public Works) :

a) and b) Totally 4.25 km long road in chainage km 75.35 to 76.60 of Gajendragad Soraba State Highway-136 in Navalagunda taluk has been damaged due to recent rains and silt removed from roadside tank covering the road.

The road has been cleared for traffic movement by doing murram coring and by building partial retaining wall at km 76.18 Annual maintenance is also being undertaken.

c) The improvement work of this road will be undertaken during the year 2009-10 depending upon the availability of funds.

356 ಶ್ರೀ ರೇವಣ್ಣ ಹೆಚ್.ಡಿ.(ಹೊಳೇನರಸೀಪುರ) : ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರದ ಜನಸಂಖ್ಯೆ ಎಷ್ಟು, ಪ್ರತಿದಿನ ನಗರಕ್ಕೆ ಸರಬರಾಜಾಗುತ್ತಿರುವ ನೀರಿನ ಪ್ರಮಾಣ ಎಷ್ಟು, ಎಷ್ಟು ಹಂತಗಳಲ್ಲಿ ಕಾವೇರಿ ನೀರು ಸರಬರಾಜಾಗುತ್ತಿದೆ, ಇದರಿಂದ ಅನುಕೂಲ ಪಡೆಯುತ್ತಿರುವ ಜನಸಂಖ್ಯೆ ಎಷ್ಟು?

ಆ) "ಬೃಹತ್ ಬೆಂಗಳೂರು ಮಹಾನಗರ 2020ನೇ ಯೋಜನೆ "ನೀರಿನ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಪ್ರತಿ ದಿನ ಸೋರಿಕೆಯಾಗುತ್ತಿರುವ ಕುಡಿಯುವ ನೀರಿನ ಪ್ರಮಾಣ ಎಷ್ಟು, ಸೋರಿಕೆಯಾಗುತ್ತಿರುವ ಹಂತಗಳು ಯಾವುವು, ಇದರಿಂದ ಸರ್ಕಾರಕ್ಕೆ ಆಗುತ್ತಿರುವ ನಷ್ಟವೆಷ್ಟು, ಸೋರಿಕೆಯನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು?

ಈ) ಪ್ರತಿ ದಿನ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಬೆಂಗಳೂರಿಗೆ ಸರಬರಾಜಾಗುತ್ತಿರುವ ನೀರಿನ ಪ್ರಮಾಣ ಎಷ್ಟು, ಇದರಿಂದ ಅನುಕೂಲ ಪಡೆಯುತ್ತಿರುವ ಜನಸಂಖ್ಯೆ ಎಷ್ಟು; ತಿಪ್ಪಗೊಂಡನಹಳ್ಳಿ ಕೆರೆ ತುಂಬಲು ಆಸರೆ ಇದ್ದ ಎಲ್ಲಾ ಮೂಲಗಳು ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದರೆ, ನೀರಿನ ಮೂಲವನ್ನು ಪುನರ್ ಸ್ಥಾಪಿಸಲು/ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಬೃಹತ್ ಬೆಂಗಳೂರು ಮಹಾನಗರದ ಜನಸಂಖ್ಯೆ ಸುಮಾರು 77.00 ಲಕ್ಷ. ಪ್ರತಿದಿನ ನಗರಕ್ಕೆ 885 ದಶಲಕ್ಷ ಲೀಟರ್ ನೀರನ್ನು ಕಾವೇರಿ ಮೂಲದಿಂದ 4 ವಿವಿಧ ಹಂತಗಳಲ್ಲಿ ಹಾಗೂ ಅರ್ಕಾವತಿ ಮೂಲದಿಂದ 65 ದಶಲಕ್ಷ ಲೀಟರ್ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇದರಿಂದ 62.00 ಲಕ್ಷ ಜನಸಂಖ್ಯೆ ಅನುಕೂಲ ಪಡೆಯುತ್ತಿದ್ದಾರೆ.

ಆ) ಬೃಹತ್ ಬೆಂಗಳೂರು ಮಹಾನಗರಕ್ಕೆ 2020ರಲ್ಲಿ ಅಂದಾಜು ಮಾಡಿರುವ ಜನಸಂಖ್ಯೆಯು 101 ಲಕ್ಷಗಳಾಗುವುದು, ಹಾಗೂ ಇದರ ಪ್ರಕಾರ ಪ್ರತಿ ದಿನ ಬೇಕಾಗುವ ನೀರಿನ ಪ್ರಮಾಣ 2125 ದಶ ಲಕ್ಷ ಲೀಟರ್. ಇದರ ಬಗ್ಗೆ ಮಂಡಳಿಯಲ್ಲಿ ಮಾಸ್ಟರ್‌ಪ್ಲಾನ್ ತಯಾರಿಸಲಾಗಿದೆ. ಈಗ ಪ್ರಗತಿಯಲ್ಲಿರುವ 500 ದಶ ಲಕ್ಷ ಲೀಟರ್ ಸಾಮರ್ಥ್ಯದ 4ನೇ ಹಂತ, 2ನೇ ಘಟ್ಟದ ಕಾವೇರಿ ನೀರು ಸರಬರಾಜು ಮುಖ್ಯ ಯೋಜನೆಯನ್ನು ಕಾರ್ಯ ರೂಪಕ್ಕೆ ತಂದರೆ ಬೆಂಗಳೂರು ನಗರಕ್ಕೆ ಪ್ರತಿದಿನ ಒಟ್ಟು ಸರಬರಾಜಾಗುವ ನೀರಿನ ಪ್ರಮಾಣ 1475 ದಶ ಲಕ್ಷ ಲೀಟರ್ ಆಗುವುದು. ಇದರ ಪ್ರಕಾರ 2020ರ ವೇಳೆಗೆ 650 ದಶ ಲಕ್ಷ ಲೀಟರ್ ಕೊರತೆ ಉಂಟಾಗುವುದು. ಈ ಕೊರತೆಯನ್ನು ನೀಗಿಸಲು ಸುಮಾರು 1000 ದಶ ಲಕ್ಷ ಲೀಟರ್ ಸಾಮರ್ಥ್ಯದ ಕಾವೇರಿ ನೀರು ಸರಬರಾಜು 5ನೇ ಹಂತ ಯೋಜನೆಯನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಈ ಯೋಜನೆಗೆ ಪ್ರಸ್ತುತ ಕಾವೇರಿ ನದಿಯಿಂದ ಬೆಂಗಳೂರು ನಗರಕ್ಕೆ ಹಂಚಿಕೆಯಾಗಿರುವ ನೀರನ್ನು 19 ಟಿ.ಎಂ.ಸಿ. ಯಿಂದ 30 ಟಿ.ಎಂ.ಸಿ.ಗಳಿಗೆ ಹೆಚ್ಚಿಸಬೇಕಾಗುವುದು. ಇದರ ಬಗ್ಗೆ ಮಂಡಳಿಯು ಸರ್ಕಾರಕ್ಕೆ ಒಂದು ಕೋರಿಕೆಯನ್ನು ನೀಡಿದೆ.

ಇ) ಪ್ರತಿ ದಿನ ಲೆಕ್ಕ ಸಿಗದ ನೀರಿನ ಪ್ರಮಾಣ ಸರಾಸರಿ ಶೇಕಡ 37 ರಷ್ಟಿದೆ.

ಈ ಕೆಳಕಂಡ ರೀತಿಗಳಲ್ಲಿ ನೀರು ಸೋರಿಕೆಯಾಗುತ್ತಿದೆ.

1) ನಗರದ ಹಳೆಯ ಪ್ರದೇಶಗಳಲ್ಲಿ ಕೊಳವೆ ಮಾರ್ಗಗಳು ಬಹಳ ಹಳೆಯದಾಗಿರುವುದರಿಂದ ತುಕ್ಕು ಹಿಡಿದು ಸವೆದಿರುವುದರಿಂದ ಭೂಮಿಯೊಳಗೆ ನೀರು ಸೋರುತ್ತಿರುವುದು.
2) ನಗರದಲ್ಲಿ ಪ್ರಮುಖ ರಸ್ತೆಗಳನ್ನು ವಿಸ್ತರಿಸಿರುವುದರಿಂದ ಕೊಳವೆ ಮಾರ್ಗಗಳು ಮತ್ತು ಗೃಹ ಸಂಪರ್ಕಗಳು ರಸ್ತೆಯ

ಮಧ್ಯ ಭಾಗಕ್ಕೂ ಬಂದು ವಾಹನ ಸಂಚಾರದ ಒತ್ತಡಕೊಳ್ಳಗಾಗಿ ಸೋರುತ್ತಿರುವುದರಿಂದ.

3) ಅನಧಿಕೃತ ಸಂಪರ್ಕಗಳಿಂದ.

4) ಸಾರ್ವಜನಿಕ ಕೊಳಾಯಿಗಳ ಬಳಕೆಯನ್ನು ನಿಯಂತ್ರಿಸದಿರುವುದರಿಂದ.

5) ಹಳೆಯ ಜಲ ಮಾಪಕಗಳ ಚಲನಾ ದಕ್ಷತೆ ಕ್ಷೀಣಿಸಿರುವುದರಿಂದ ನೀರಿನ ಬಳಕೆಯು ಕಡಿಮೆ ಪ್ರಮಾಣದಲ್ಲಿ ದಾಖಲಾಗುತ್ತಿರುವುದು.

6) ಸಾಲು .ಮರದ ಬೇರುಗಳು, ಕೊಳವೆ ಮಾರ್ಗಗಳನ್ನು ಪಲ್ಲಟಗೊಳಿಸಿ ಕೊಳವೆ ಜೋಡಣೆಗಳಿಂದ ನೀರು ಸೋರುತ್ತಿರುವುದರಿಂದ.

7) ತುಕ್ಕು ಹಿಡಿದು ಸವಕಲು ಆಗಿರುವ ಗೃಹ ಸಂಪರ್ಕಗಳ ಜಿ.ಐ. ಕೊಳವೆಯನ್ನು ಬಳಕೆದಾರರು ಕಾಲಕಾಲಕ್ಕೆ ಬದಲಾಯಿಸದೆ ಇರುವುದರಿಂದ ಜಿ.ಐ. ಕೊಳವೆ ಮಾರ್ಗದಲ್ಲಿ ರಂದ್ರಗಳು ನಿರ್ಮಾಣಗೊಂಡು ನೀರು ಸೋರುತ್ತಿರುತ್ತದೆ.

8) ನಗರದಲ್ಲಿ ನೀರು ಶೇಖರಣಾ ನೆಲಮಟ್ಟದ ಜಲಾಶಯಗಳು ನಿರ್ಮಾಣಗೊಂಡು 35 ವರ್ಷಕ್ಕೂ ಮೇಲ್ಪಟ್ಟು, ಹಳೆಯದಾಗಿರುವ ಕಾರಣ ಇವುಗಳ ನೆಲದಲ್ಲಿ ನೀರು ಸೋರುತ್ತಿರುತ್ತದೆ. ಇದರಿಂದ ಆಗುತ್ತಿರುವ ಸೋರುವಿಕೆಯನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಹೆಚ್ಚುವರಿ ಗಾತ್ರದ ಕೊಳವೆಗಳನ್ನು ಮೃದು ಉಕ್ಕಿನ ಕೊಳವೆಗಳಿಂದ ಬೆಸುಗೆ ಹಾಕಿ ಜೋಡಿಸಲಾಗುತ್ತಿದೆ ಮತ್ತು ಕೊಳವೆ ಜೋಡಣೆಯನ್ನು ರಬ್ಬರ್ ರಿಂಗ್‌ಗಳಿಂದ ಮಾಡಲಾಗುತ್ತಿದೆ.

2) ಸಾಲು ಮರದ ಬೇರುಗಳಿಂದ ಸೋರುವಿಕೆಯನ್ನು ತಪ್ಪಿಸಲು ಕೊಳವೆ ಮಾರ್ಗವನ್ನು ಸ್ಥಳಾಂತರಿಸಲಾಗುತ್ತಿದೆ.

3) 30 ವರ್ಷಕ್ಕೂ ಮೇಲ್ಪಟ್ಟು ಹಳೆಯದಾದ ಮತ್ತು ತುಕ್ಕು ಹಿಡಿದ ಕೊಳವೆಗಳನ್ನು ಹೊಸಕೊಳವೆಗಳಿಂದ ಹಂತ ಹಂತವಾಗಿ ಬದಲಾಯಿಸುವ ಯೋಜನೆ ಜಾರಿಯಲ್ಲಿದೆ.

4) ರಸ್ತೆ ಮಧ್ಯದಲ್ಲಿ ಹಾದು ಹೋಗುತ್ತಿರುವ ಕೊಳವೆಗಳನ್ನು ರಸ್ತೆ ಬದಿಗೆ ಸ್ಥಳಾಂತರಿಸಲಾಗುತ್ತಿದೆ.

5) ದೋಷಪೂರಿತ ಮಾಪನಗಳನ್ನು ಬದಲಾಯಿಸಲಾಗುತ್ತಿದೆ.

6) ಅನಧಿಕೃತ ನೀರಿನ ಸಂಪರ್ಕಗಳನ್ನು ಗುರುತಿಸಿ ಅಧಿಕೃತ ಗೊಳಿಸಲಾಗುತ್ತಿದೆ.

7) ನೀರು ಸರಬರಾಜು ಉತ್ತಮ ಪಡಿಸಲು ಹಾಗೂ ಲೆಕ್ಕಕ್ಕೆ ಸಿಗದ ನೀರನ್ನು ಕಡಿಮೆ ಮಾಡಲು 3 ವಿಭಾಗಗಳಲ್ಲಿ ಜಪಾನ್ ಬ್ಯಾಂಕ್ ಸಹಯೋಗದೊಂದಿಗೆ ರೂ.300/– ಕೋಟಿ ವೆಚ್ಚದಲ್ಲಿ ಕಾರ್ಯ ಯೋಜನೆ ಹಮ್ಮಿಕೊಳ್ಳಲಾಗಿದೆ.

8) ಗೃಹಗಳಿಗೆ ನೀರು ಸಂಪರ್ಕ ಕಲ್ಪಿಸುವ ಜಿ.ಐ. ಕೊಳವೆ ಉಪಯೋಗಿಸುವ ಬದಲಾಗಿ ಎಂ.ಡಿ.ಪಿ.ಇ. ಪುಡ್‌ಗ್ರೇಡ್ ಕೊಳವೆಗೆ ಹೊರ ಕವಚ ಕೊಳವೆಯೊಂದಿಗೆ ಅಳವಡಿಸಲು ಮಾರ್ಪಾಡು ಮಾಡಲಾಗುತ್ತಿದೆ.

9) ನಗರದ ವಿವಿಧ ಸ್ಥಳಗಳಲ್ಲಿರುವ ಉನ್ನತ ವ್ಯಾಸದ ಕೊಳವೆಗಳಲ್ಲಿ ಹರಿಯುತ್ತಿರುವ ನೀರಿನ ಪ್ರಮಾಣ ಲೆಕ್ಕಿಸುವ ಪ್ರಯುಕ್ತ ಸಗಟು ಮಾಪನಗಳನ್ನು ಜೆ.ಎನ್.ಎನ್.ಯು. ಆರ್.ಎಂ. ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ.

10) ಕೊಳಚೆ ಪ್ರದೇಶದ ನಿವಾಸಿಗಳಿಗೆ ಉಚಿತ ಮಾಪನಅಳವಡಿಸಿ ಸಂಪರ್ಕ ಕಲ್ಪಿಸಲಾಗುತ್ತಿದೆ.

ಈ) ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಪ್ರಸ್ತುತ ದಿನಂಪ್ರತಿ 65 ದಶಲಕ್ಷ ಲೀಟರ್ ನೀರು ಸರಬರಾಜು ಮಾಡಲಾಗುತ್ತಿದೆ. ಇದರಿಂದ ಅನುಕೂಲ ಪಡೆಯುತ್ತಿರುವ ಜನಸಂಖ್ಯೆ ಸುಮಾರು 2.5 ಲಕ್ಷ. ತಿಪ್ಪಗೊಂಡನಹಳ್ಳಿ ಕೆರೆಗೆ ಬರುವ ನೀರಿನ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಅರ್ಕಾವತಿ ನದಿಯ ಪುನಶ್ಚೇತನ ಮಾಡಲು ವಿವಿಧ ಇಲಾಖೆಗಳು ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದ್ದು, ಈ ದಿಸೆಯಲ್ಲಿ ಸಮನ್ವಯ ಸಾಧಿಸಲು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಇಲಾಖೆಗಳನ್ನೊಳಗೊಂಡ ಅಂತರ ಇಲಾಖೆ ಅಧಿಕಾರಿಗಳ ಸಮಿತಿಯೊಂದನ್ನು ರಚಿಸಲಾಗಿದೆ. ಅರ್ಕಾವತಿ ಮತ್ತು ಕುಮುದ್ವತಿ ನದಿ ಪಾತ್ರದಲ್ಲಿ ಒತ್ತುವರಿ ತೆರವುಗೊಳಿಸುವ ಬಗ್ಗೆ ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯನ್ನು ಹಾಗೂ ಸಂಬಂಧಿಸಿದ ಇತರೆ ಇಲಾಖೆಗಳನ್ನು ಕೊರಲಾಗಿದೆ.